**PW_12**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**

ಚಿತ್ರದುರ್ಗ

ಸಿ.ಸಿ.**1649/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಮಂಜುಳಾ ಎಂ | PW:12 |
| ಗಂಡನ ಹೆಸರು | - | ಲಕ್ಷ್ಮಣ್ ನಾಯ್ಕ | CW:13 |
| ವಯಸ್ಸು | - | 57 ವರ್ಷ | ಪ್ರಮಾಣ ವಚನ ಬೋದಿಸಿದ |
| ಉದ್ಯೋಗ | - | ಉಪ ನಿರೀಕ್ಷಕರು,<br>ಮಹಿಳಾ ಪೊಲೀಸ್ ಠಾಣೆ,<br>ಚಿತ್ರದುರ್ಗ. | ದಿ: 30/01/2026 |
| ವಾಸ | - | ಚಿತ್ರದುರ್ಗ | |

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ**

ನಾನು 18.07.2020 ರಿಂದ ಇಲ್ಲಿಯವರೆಗೆ ಮಹಿಳಾ ಪೊಲೀಸ್ ಠಾಣೆಯಲ್ಲಿ ಕೆಲಸ ಮಾಡುತ್ತಾರ ಇದ್ದೇನೆ. ದಿಃ17.04.2022 ರಂದು ಚಾಸಾ.12 ರವರಿಂದ ಮುಂದಿನ ತನಿಖೆ ಗಾಗಿ ಕಡತವನ್ನು ಪಡೆದಿರುತ್ತೇನೆ. ಕಡತವನು ಪರಿಶೀಲಿಸಿ ಚಾಸಾ.4 ಮತ್ತು 5 ರವರ ಹೇಳಿಕೆ ಪಡೆದಿರುತ್ತೇನೆ. ನಂತರದಲ್ಲಿ ದಿಃ30.04.2022 ರಂದು ಚಾಸಾ.8 ರವರ ಹೇಳಿಕೆ ಪಡೆದಿರುತ್ತೇನೆ. ದಿಃ06.05.2022 ರಂದು ಚಾಸಾ.6 ಮತ್ತು 7 ರವರ ಹೇಳಿಕೆ ಪಡೆದಿರುತ್ತೇನೆ. ದಿಃ09.06.2022 ರಂದು ಚಾಸಾ.1 ರವರ ಗಾಯದ ಪ್ರಮಾಣಪತ್ರ ಸ್ವೀಕರಿಸಿರುತ್ತೇನೆ. ಸದರಿ ಗಾಯದ ಪ್ರಮಾಣಪತ್ರವನ್ನು ಈಗಾಗಲೇ ನಿಪಿ.9 ಅಂತ ಗುರುತಿಸಲಾಗಿರುತ್ತದೆ. ಸಾಕ್ಷಿಯ ಸಹಿ ನಿಪಿ.9(ಬಿ) ಅಂತ ಗುರುತಿಸಲಾಯಿತು. ಅದೇದಿನದಂದು ಚಾಸಾ.4 ರವರ ಗಾಯದ ಪ್ರಮಾಣಪತ್ರವನ್ನು ಸ್ವೀಕರಿಸಿಕೊಂಡಿರುತ್ತೇನೆ. ಸದರಿ ಗಾಯದ ಪ್ರಮಾಣಪತ್ರವನ್ನು ಈಗಾಗಲೇ ನಿಪಿ.8

ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯ ಸಹಿಯನ್ನು ನಿಪಿ.8(ಬಿ) ಎಂದು ಗುರುತಿಸಲಾಯಿತು. ದಿ:22.06.2022 ರಂದು ಈ ಕೇಸಿನ ಪಿರ್ಯಾದಿಯ 164 ಹೇಳಿಕೆ ಪಡೆಯುವ ಸಲುವಾಗಿ ನ್ಯಾಯಾಲಯಕ್ಕೆ ಮನವಿ ಕಳುಹಿಸಿರುತ್ತೇನೆ. ಸೆಕ್ಷನ್ 65 ಬಿ ಪ್ರಮಾಣಪತ್ರ ನಾನು ಕೊಟ್ಟಿರುತ್ತೇನೆ . ಸದರಿ ಪ್ರಮಾಣಪತ್ರವನ್ನು ನಿಪಿ.12 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.12(ಎ) ಎಂದು ಗುರುತಿಸಲಾಯಿತು. ತನಿಖೆ ಯನ್ನು ಪೂರ್ಣಗೊಳಿಸಿ ಆರೋಪಿತರ ವಿರುದ್ದ ಸಾಕಷ್ಟು ಪುರಾವಿಗಳು ಕಂಡುಬಂದಿದ್ದರಿಂದ 28.06.2022 ರಂದು ಚಾರ್ಜ್ ಶೀಟ್ ಸಲ್ಲಿಸಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು 1 ಮತ್ತು 2 ನೇ ಆರೋಪಿಯ ಪರ ಶ್ರೀ ಬಿ ಕೆ ಎಂ ವಕೀಲರಿಂದ:**

ನಾನು ಕಡತವನ್ನು ಪಡೆದುಕೊಂಡು ಸಾಕ್ಷಿಗಳ ಹೇಳಿಕೆ ಪಡೆದಿರುತ್ತೇನೆ ಅಂತ ಹೇಳಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ. 09.06.2022 ರಂದು ಗಾಯದ ಪ್ರಮಾಣಪತ್ರ ಪಡೆದಿರುತ್ತೇನೆ ಅಂತ ಹೇಳಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಪೊಟೊ ತೆಗೆಯುವ ಸಮಯದಲ್ಲಿ ನಾನು ಹೋಗಿರಲಿಲ್ಲ ಎಂದರೆ ಹೌದು. ಆ ಸಮಯದಲ್ಲಿ ನಾನು ಹೋಗದೇ ಇರುವುದರಿಂದ ನಾನು ಸೆಕ್ಷನ್ 65 ಬಿ ಪ್ರಮಾಣಪತ್ರ ಹಾಕಲು ಬರಲ್ಲ ಎಂದರೆ ಸರಿಯಲ್ಲ. ಚಾಸಾ.1 ಮತ್ತು 4 ರವರ ಮೇಲೆ ಆರೋಪಿತರು ಯಾವುದೇ ಹಲ್ಲೆ ಮಾಡಿರುವುದಿಲ್ಲ ಚಾಸಾ.1 ಮತ್ತು 4 ರವರ ಅಕ್ಕತಂಗಿಯರ ಒತ್ತಡದ ಮೇಲೆ ನಾನು ಸುಳ್ಳು ಚಾರ್ಜ್ ಶೀಟ್ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಮೇಲಾದಿಕಾರಿಗಳ ಮಾತನ್ನು ಕೇಳಿ ಅಂಕಿ ಅಂಶಕ್ಕೊಸ್ಕರ ಸುಳ್ಳು ಕೇಸ್ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ.1 ಮತ್ತು 4 ರವರಿಗೆ ಆರೋಪಿತರು ಎಂದು ಹೊಡೆದಿಲ್ಲ ಬೈದಿಲ್ಲ ಹಲ್ಲೆ ಮಾಡಿಲ್ಲ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಚಾಸಾ.1 ಮತ್ತು 4 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯು

ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು**
**ಜೆ ಎಂ ಎಫ್ ಸಿ ನ್ಯಾಯಾಧೀಶರು, ಚಿತ್ರದುರ್ಗ**